<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆ 549/2021**

**ಸಾಕ್ಷಿಯನ್ನು ದಿಃ 22.08.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಮಂಜುಳ ಎಲ್. ಆರ್. | ಸಿ.ಡಬ್ಲ್ಯೂಃ **1** | ಪಿ.ಡಬ್ಲ್ಯೂಃ 1 |
| ಗಂಡನ ಹೆಸರು | ಕಿರಣ್ ಕೆ. ಎಮ್ | | |
| ವಯಸ್ಸು | **37** ವರ್ಷ | | |
| ಕೆಲಸ | ಏನೂ ಇಲ್ಲ | | |
| ವಾಸಸ್ಥಳ | ಕಲ್ಲುಣಿಕೆ | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

1. 1 ನೇ ಆರೋಪಿ ನನ್ನ ಗಂಡ, 2 ನೇ ಆರೋಪಿ ನನ್ನ ಮಾವ, 3 ನೇ ಆರೋಪಿ ನನ್ನ ಅತ್ತೆ, 4 ನೇ ಆರೋಪಿ ನನ್ನ ಗಂಡನ ಎರಡನೇ ಹೆಂಡತಿ, 5 ನೇ ಆರೋಪಿ ನನ್ನ ಗಂಡನ ಎರಡನೇ ಹೆಂಡತಿ ಅಣ್ಣ. 6 ನೇ ಆರೋಪಿ ನನ್ನ ಗಂಡನ ಎರಡನೇ ಹೆಂಡತಿ ತಂದೆ, 7 ನೇ ಆರೋಪಿ ನನ್ನ ಗಂಡನ ಎರಡನೇ ಹೆಂಡತಿಯ ತಾಯಿ.

2. ನನ್ನ ಹಾಗೂ 1 ನೇ ಆರೋಪಿಯ ಮದುವೆ ದಿಃ 19.05.2014 ರಂದು ಕುಶಾಲನಗರದ ಕೊಡಗು ಸಮಾಜದಲ್ಲಿ ಆಗಿರುತ್ತದೆ. ನಮ್ಮ ದಾಂಪತ್ಯದಿಂದ ಎರಡು ಮಕ್ಕಳು, ಒಂದು ಗಂಡು ಹಾಗೂ ಒಂದು ಹೆಣ್ಣು ಮಗು ಜನಿಸಿರುತ್ತಾರೆ. ನಾನು ಹಾಗೂ 1 ನೇ ಆರೋಪಿ 3 ವರ್ಷ ಚೆನ್ನಾಗಿದ್ದೇವು. ನಂತರ 1 ನೇ ಆರೋಪಿ ನನಗೆ ಗೊತ್ತಿಲ್ಲದ ಹಾಗೆ ಬಳ್ಳಾರಿಯಲ್ಲಿ 4 ನೇ ಆರೋಪಿ ವಾಣಿ ಜೊತೆ 01.12.2016 ರಲ್ಲಿ ಸುರ್ಯ ಭವನ, ಬಳ್ಳಾರಿಯಲ್ಲಿ ಅವರ ಮದುವೆ ಆಗಿರುತ್ತದೆ.

3. ನಂತರ 1 ರಿಂದ 7 ನೇ ಆರೋಪಿತರು ನನಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು. 4 ನೇ ಆರೋಪಿ ವಾಣಿ ನನಗೆ 1 ನೇ ಆರೋಪಿ ನನ್ನ ಗಂಡನನ್ನು ಬಿಟ್ಟುಬಿಡು ಎಂದು ನೀನು ಕೆಳಜಾತಿಯವಳು, ಸೂಳೆ, ಅಂತವಳು– ಇಂತವಳು ಎಂದು ಬೈಯುತ್ತಿದ್ದರು. 1 ನೇ ಆರೋಪಿ ನನ್ನ ಗಂಡ ಹಾಗೂ 2 ರಿಂದ 7 ನೇ ಆರೋಪಿತರು ನನಗೆ ಕೈಯಿಂದ ಮೈಕೈಗೆ ಹೊಡೆಯುತ್ತಿದ್ದರು.

4. ದಿಃ 12.06.2020 ರಂದು ರಾತ್ರಿ 8.30–9.00 ರ ಸಮಯ 1 ರಿಂದ 7 ನೇ ಆರೋಪಿತರು ನೀನು 1 ನೇ ಆರೋಪಿಯನ್ನು ಬಿಡಲಿಲ್ಲವಾದರೆ ಕೊಲೆ ಮಾಡುತ್ತೀವೆ ಎಂದು ಬೆದರಿಕೆ ಹಾಕಿರುತ್ತಾರೆ. ನಂತರ ದಿಃ19.06.2020 ರಂದು 1 ರಿಂದ 7 ನೇ ಆರೋಪಿತರು ಬಂದು ನನಗೆ ವಿಷ ಕುಡಿಸಿದರು. 1 ನೇ ಆರೋಪಿ ನನ್ನ ಗಂಡ ಔಷಧಿ ಅಂಗಡಿ ಇಟ್ಟುಕೊಂಡಿದ್ದಾರೆ. 1 ರಿಂದ 7 ನೇ ಆರೋಪಿತರು ಬಂದು ನನಗೆ ವಿಷ ಕುಡಿಸಿ, ಬಾಗಿಲು ಹಾಕಿಕೊಂಡು ಹೊರಟುಹೋದರು.

5. ತಕ್ಷಣ ನಾನು ನನ್ನ ತಾಯಿಗೆ ಕರೆ ಮಾಡಿ ವಿಷಯ ತಿಳಿಸಿದೆ. ನಂತರ ನನ್ನ ತಾಯಿ ಹುಣಸೂರು ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಂದ ಮೈಸೂರು ಕೆ.ಆರ್. ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ನಂತರ ನಾನು ದೂರು ನೀಡಿರುತ್ತೇನೆ. ದೂರನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು.

6. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ಗಲಾಟೆ ಆದ 1 ತಿಂಗಳ ನಂತರ ಪೊಲೀಸರು ನಾನು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 09.00– 10.00 ರವರೆಗೆ ಮಹಜರ್ ಮಾಡಿ ಅದೇ ಸ್ಥಳದಲ್ಲಿ ನನ್ನ ಹಾಗೂ ಚಾಸಾ–5,6 ರವರ ಸಹಿ ಪಡೆದಿರುತ್ತಾರೆ. ಸದರಿ ಸ್ಥಳ ಮಹಜರ್ ಅನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು.

**ಪಾಟೀಸವಾಲುಃ 2,3 ನೇ ಆರೋಪಿ ಪರ ವಕೀಲರಾದ ಶ್ರೀ ಎಮ್ ಎ ಎನ್ ಅವರಿಂದ–**

7. ನಿಪಿ.1 ದೂರನ್ನು ಪೊಲೀಸರು ಬರೆದಿರುತ್ತಾರೆ. ನಾನು ನೀಡಿದ ದೂರು ಬೇರೆ, ಆದರೆ ಪೊಲೀಸರು ಬರೆದಿರುವುದೇ ಬೇರೆ ಎಂದು ಸಾಕ್ಷಿ ನುಡಿಯುತ್ತಾರೆ. ನಿಪಿ.1 ದೂರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅದರಲ್ಲಿರುವ ಅಂಶಗಳನ್ನೆ ನಾನು ಮುಖ್ಯವಿಚಾರಣೆಯಲ್ಲಿ ಹೇಳಿದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ.

8. ನನ್ನ ಹಾಗೂ 1 ನೇ ಆರೋಪಿ ಮದುವೆ ಸಮಯ ನಮ್ಮ ಕಡೆಯಿಂದ ಒಂದು ಸಾವಿರ ಜನ ಬಂದಿದ್ದರು. ಆದರೆ 1 ನೇ ಆರೋಪಿ ಕಡೆಯಿಂದ ಯಾರು ಬಂದಿರಲಿಲ್ಲ. ಸದರಿ ಮದುವೆಗೆ 2 ,3 ನೇ ಆರೋಪಿತರಿಗೆ ನನ್ನ ಹಾಗೂ 1 ನೇ ಆರೋಪಿ ಮದುವೆ ವಿಚಾರ ಗೊತ್ತಿತ್ತು. ಆದರೆ ಅವರು ಮದುವೆಗೆ ಬಂದಿರಲಿಲ್ಲ.

**9.** ನನ್ನ ಹಾಗೂ 1 ನೇ ಆರೋಪಿ ದಾಂಪತ್ಯದಿಂದ ಜನಿಸಿರುವ ಮಕ್ಕಳ ಜನ್ಮದ ಸಮಯ 2 ,3 ನೇ ಆರೋಪಿತರು ಬಂದಿದ್ದರು. 2 ,3 ನೇ ಆರೋಪಿತರು ಬಳ್ಳಾರಿಯಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಅವರು ಬೆಂಗಳೂರಿನಲ್ಲಿ ವಾಸವಾಗಿದ್ದರು, ಆದರೆ ಅವರ ಕಾಯಂ ವಿಳಾಸ ಬಳ್ಳಾರಿ ಎಂದು ಸಾಕ್ಷಿ ನುಡಿಯುತ್ತಾರೆ. 1 ನೇ ಆರೋಪಿ ನನ್ನನ್ನು ಬಳ್ಳಾರಿಗೆ ಕರೆದುಕೊಂಡು ಹೋಗಿದ್ದರು. ಆದರೆ ನಾನು ನನ್ನ ಅತ್ತೆ – ಮಾವ ವಾಸವಾಗಿರುವ ಬೆಂಗಳೂರು ಮನೆಗೆ ಹೋಗಿಲ್ಲ. 2 ,3 ನೇ ಆರೋಪಿತರು ಯಾವತ್ತಿಗೂ ನನ್ನ ಮನೆಗೆ ಬಂದಿಲ್ಲ, ಆದರೆ ನಾವು ದೂರವಾಣಿ ಸಂಪರ್ಕದಲ್ಲಿ ಇದ್ದೇವು. ಆ ಸಮಯದಲ್ಲಿ 2,3 ನೇ ಆರೋಪಿತರು ನನಗೆ ಬೈಯುತ್ತಿದ್ದರು ಆದರೆ ಹೊಡೆಯುತ್ತಿರಲಿಲ್ಲ. ಅ ಸಮಯದಲ್ಲಿ ನಾನು ಕರೆ ಮಾಡುತ್ತಿದ್ದೆ ಅವರು ಸಹ ಕರೆ ಮಾಡುತ್ತಿದ್ದರು ಆದರೆ ನನ್ನ ನಂಬರಿಗೆ ಕರೆ ಮಾಡುತ್ತಿರಲಿಲ್ಲ, ನನ್ನ ಗಂಡನ ಮೊಬೈಲ್ ಗೆ ಕರೆ ಮಾಡುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

10. ನನಗೆ ವಿಷ ಕುಡಿಸಿದ ಸಮಯದಲ್ಲಿ 2,3 ನೇ ಆರೋಪಿತರು ಅಲ್ಲಿ ಇರಲಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹುಣಸೂರಿನ ರೆಹಮತ್ ಮೊಹಲ್ಲಾದಲ್ಲಿ 1 ನೇ ಆರೋಪಿ ಕಿರಣ್ ಜೊತೆ ವಾಸವಾಗಿದ್ದೆ ಎಂದರೆ ಸರಿ. ಸದರಿ ಮನೆಯ ಅಕ್ಕಪಕ್ಕ ಮನೆಗಳು ಇದ್ದವು ಎಂದರೆ ಸರಿಯಲ್ಲ. ಅದರ ದೂರದಲ್ಲಿ ಎರಡು ಮನೆಗಳು ಇದ್ದವು, ಒಂದು ಮನೆಯಲ್ಲಿ ಮಾತ್ರ ವಾಸ ಇದ್ದರು. ಮಧ್ಯ ರಾತ್ರಿ 12 ಗಂಟೆ ಸಮಯ ಕಿರುಚಾಟ ಆದರೆ ಅಕ್ಕಪಕ್ಕ ಮನೆಯವರಿಗೆ ಕೇಳುತ್ತದೆ ಎಂದರೆ ನಾವು ಮನೆಯಲ್ಲಿ ಮಾತನಾಡಿದರೆ ಕೇಳುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಆ ದಿನ ಯಾವುದೇ ಗಲಾಟೆ ನಡೆದಿಲ್ಲ ಆದ್ದರಿಂದ ಯಾರಿಗೂ ಏನೂ ಕೇಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಆ ದಿನ ಯಾವುದೇ ವಿಷ ಕುಡಿಸಿಲ್ಲ, ಗಲಾಟೆ ಮಾಡಿಲ್ಲ ಎಂದರೆ ಅವರು ವಿಷ ಕುಡಿಸಿದ್ದರಿಂದಲೇ ನಾನು ಆಸ್ಪತ್ರೆಗೆ ಸೇರಿದ್ದೆ ಎಂದು ಸಾಕ್ಷಿ

ನುಡಿಯುತ್ತಾರೆ. ನನ್ನ ತಂದೆ ಮನೆಯವರಿಂದ ಸಣ್ಣ ಪುಟ್ಟ ಮನಸ್ತಾಪ ಆಗಿ ನಾನೇ ವಿಷ ಸೇವಿಸಿದ್ದೆ ಎಂದರೆ ಸುಳ್ಳು.

**ಮುಂದುವರಿದ ಪಾಟೀಸವಾಲುಃ ಆರೋಪಿಪರ ವಕೀಲರು ಕಾಲಾವಕಾಶ ಕೋರಿದ್ದು, ರೂ.250/- ಭತ್ಯೆಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.